**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1709/23**

ಸಾಕ್ಷಿಯ ಹೆಸರುಃ ಕೆ ಎನ್ ಸುಬ್ಬಯ್ಯ
ತಂದೆ /ಗಂಡನ ಹೆಸರು ಃ ಕೆ ಸಿ ನಂಜುಂಡ
ವಯಸ್ಸು ಃ **62**
ಉದ್ಯೋಗ ಃ ನಿರುದ್ಯೋಗಿ
ವಾಸ ಸ್ಥಳ ಃ ಕುಶಾಲನಗರ.

ಪ್ರಾಸಾ5
ಚಾಸಾ12

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 24.10.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ದಿಃ **23.06.2023** ರಂದು ರಾಯಲ್ ಎನ್‌ಫಿಲ್ಡ್ ಶೋರುಂ ಬಳಿ ನಾನು ನನ್ನ ಸ್ನೇಹಿತರಾದ ಚಾಸಾ **11** ರವರು ಮಾತನಾಡಿಕೊಂಡು ನಿಂತಿರುವಾಗ ಪೋಲಿಸರು ಅಲ್ಲಿಗೆ ಬಂದು ಅಪಘಾತ ವಿಚಾರ ತಿಳಿಸಿ ಮಹಜರಗೆ ಸಹಕರಿಸುವಂತೆ ಕೇಳಿದ್ದು ಅದಕ್ಕೆ ನಾವು ಒಪ್ಪಿದ ಮೇರೆಗೆ ನಮಗೆ ನೋಟಿಸನ್ನು ಜಾರಿ ಮಾಡಿ ಅಲ್ಲಿಂದ ಅಪಘಾತ ಸ್ಥಳಕ್ಕೆ ಹೋಗಿದ್ದು ಚಾಸಾ **3** ರವರು ಅಪಘಾತ ಸ್ಥಳವನ್ನು ತೋರಿಸಿಕೊಟ್ಟ ಮೇರಗೆ ಪೋಲಿಸರು ನಮ್ಮ ಸಮಕ್ಷಮ ಮಹಜರ ಕ್ರಮವನ್ನು ಜರುಗಿಸಿದ್ದು ಅದಕ್ಕೆ ನಾವು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ . ಆ ಸಮಯದಲ್ಲಿ ನಾನು ಚಾಸಾ **11** ಮತ್ತು **3** ರವರು ಹಾಜರಿದ್ದೆವು . ಸದರಿ ಮಹಜರನ್ನು ಸಂಜೆ **4.00** ಯಿಂದ **4.45** ಸಮಯದಲ್ಲಿ ಮಾಡಲಾಯಿತು .

ನಂತರ ಅಮಾನತ್ತು ಮಹಜರಿಗೆ ಪೋಲಿಸ ಠಾಣೆಗೆ ಬರಲು ಸೂಚಿಸಿದ್ದು ಅಲ್ಲಿಂದ ನಾವು ಪೋಲಿಸ ಠಾಣೆಗೆ ಹೋಗಿರುತ್ತೇವೆ. ಅಲ್ಲಿ ಅಪಘಾತಗೊಳಪಟ್ಟ ಬೈಕ ಹಾಗು ಸ್ಕೂಟರನ್ನು ಪೋಲಿಸರು ಮಹಜರ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ . ಸದರಿ ಬೈಕ ಸಂಖ್ಯೆ ಕೆ ಎ **45** ಇ ಬಿ **6493** ಆಗಿದ್ದು ಸ್ಕೂಟಿ ಸಂಖ್ಯೆ ಕೆ ಎ **12** ಆರ್ **5488** ಆಗಿರುತ್ತದೆ . ಸದರಿ ಮಹಜರಿಗೆ

ನಾನು ಸ್ಥಳದಲ್ಲಿ ಸಹಿ ಮಾಡಿದ್ದು ಆಗ ನನ್ನೊಂದಿಗೆ ಚಾಸಾ **3** ಮತ್ತು **12** ರವರು ಹಾಜರಿದ್ದರು **.** ಆಗ ಸಮಯ ಸಂಜೆ **5.00** ರಿಂದ **5.45** ಆಗಿರುತ್ತದೆ**.**

ಸಾಕ್ಷಿ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ **2** ಎಂದು **,** ಸಾಕ್ಷಿ ಸಹಿಯನ್ನು ನಿಪಿ **2** ಸಿ ಎಂದು **,** ಅಮಾನತ್ತು ಮಹಜರ ಈಗಾಗಲೆ ನಿಪಿ **3** ಎಂದು ಗುರುತಿಸಲಾಗಿದ್ದು**,** ಸಾಕ್ಷಿ ಸಹಿಯನ್ನು ನಿಪಿ **3** ಸಿ ಎಂದು ಗುರುತಿಸಲಾಯಿತು **.**

ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಮ್ ಕೆ ವಕೀಲರಿಂದ

ಅಪಘಾತ ಸ್ಥಳದಲ್ಲಿ ಕಲೆ ಇದ್ದು ಟೈರ ಗುರುತುಗಳು ಇದ್ದುದ್ದನ್ನು ನಾನು ಗಮನಿಸಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಬೈಕಿಗೆ ಸಂಬಂದಿಸಿದ ಯಾವುದೆ ವಸ್ತುಗಳು ಕಂಡು ಬಂದಿರುವುದಿಲ್ಲ ಹಾಗು ಪೋಲಿಸರು ಅದನ್ನುಅಮನತ್ತು ಪಡಿಸಿಕೊಂಡಿರುವುದಿಲ್ಲ. ರಾಯಲ್ ಎನ್ ಫಿಲ್್ಡ ಶೋರಂ ನಿಂದ ಅಪಘಾತ ಸ್ಥಳ ಎಷ್ಟು ದೂರ ಇದೆ ಎಂದು ಪೋಲಿಸರು ಅಳತೆ ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. ಪೋಲಿಸರು ರಸ್ತೆಯ ಅಗಲವನ್ನು ಅಳತೆ ಮಾಡಿ, ಅಪಘಾತ ಸ್ಥಳನ್ನು ಗುರುತು ಮಾಡಿರುತ್ತಾರೆ . ಯಾವುದೆ ಕಟ್ಟಡದಿಂದ ಅಪಘಾತ ಸ್ಥಳ ಎಷ್ಟು ದೂರವಿದೆ ಎಂದು ನನಗೆ ನೆನಪಿಲ್ಲ. ಸ್ಥಳದಲ್ಲಿ ಯಾವುದೆ ವಾಹನ ಬಿದ್ದಿರುವ ಗುರುತು ಇರುವುದಿಲ್ಲ. ಅಪಘಾತ ಸ್ಥಳವು ರಸ್ತೆಯ ಕೊನೆಯಿುಂದ 3 ರಿಂದ 4 ಅಡಿ ದೂರದಲ್ಲಿತ್ತು . ಪೋಲಿಸರ ಸ್ಕೆಚ್ ನ್ನು ತಯಾರಿಸಿದ್ದು ಅದು ನನಗೆ ಸರಿಯಾಗಿ ಅರ್ಥವಾಗಿಲ್ಲ . ಮಹಜರಿಗೆ ನಾನು ಓದಿ ಸಹಿ ಮಾಡಿದ್ದು ಈಗ ನನಗೆ ನೆನಪಿಲ್ಲ . ಮಹಜರನ್ನು ಪೋಲಿಸರ ಬರೆದಿದ್ದು ನಮ್ಮ ಸಮಕ್ಷಮ ಅದನ್ನು ಬರೆಯಲು ಯಾರು ಸೂಚನೆಗಳನ್ನು ನೀಡಿರುವುದಿಲ್ಲ . ನನಗೆ ಚಾಸಾ 3 ರವರ ಪರಿಚಯ ಇಲ್ಲ . ಚಾಸಾ 11 ರವರು ನನ್ನ ಸ್ನೇಹಿತರು . ಅಪಘಾತ ಸ್ಥಳದ

ಚೆಕ್ಕುಬಂಧಿಯನ್ನು ನನಗೆ ಹೇಳಲು ಬರುವುದಿಲ್ಲ . ರಾಯಲ್ ಎನ್ ಫಲ್ಡ ಶೂರಂನಿಂದ ಸುಮಾರು 25 ರಿಂದ 30 ಅಡಿಯಲ್ಲಿ ಅಪಘಾತ ಸ್ಥಳ ಇತ್ತು . ಪೋಲಿಸರು ಇಂತಹದ್ದೇ ಸ್ಥಳದಲ್ಲಿ ಬೈಕ ಹಾಗು ಸ್ಕೂಟಿ ಬಿದ್ದಿತ್ತು ಎಂದು ಗುರುತು ಮಾಡಿ ತೋರಿಸಿರುವುದಿಲ್ಲ . ಅಪಘಾತ ಸಮಯದಲ್ಲಿ ಮೃತರು ಹಾಗು ಗಾಯಾಳು ಅಲ್ಲಿ ಬಿದ್ದಿದ್ದರು ಎಂದು ಗುರುತು ಮಾಡಿರುವುದಿಲ್ಲ . ಠಾಣೆಯಲ್ಲಿ ಸಹಿ ಮಾಡಿದ ಮಹಜರಗೆ ತಕ್ಕಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಅಮಾನತ್ತು ಮಹಜರ ಸಮಯದಲ್ಲಿ ವಾಹನಗಳು ಪೋಲಿಸ ಠಾಣೆಯ ಬಳಿ ಇದ್ದು ಅದನ್ನು ಯಾರು ಹಾಜರುಪಡಿಸಿರುವುದಿಲ್ಲ . ಮಹಜರನಲ್ಲಿ ವಾಹನಗಳು ಜಕಂ ಗೊಂಡಿರುವ ಬಗ್ಗೆ ನಮೂದಿಸಿದ್ದು ಈಗ ನನಗೆ ನೆನಪಿಲ್ಲ . ಜಕಂಗಳನ್ನು ಪೋಲಿಸರು ನಮಗೆ ತೋರಿಸಿರುತ್ತಾರೆ . ಸ್ಕೂಟಿ ಸಿಲ್ವರ ಬಣ್ಣದ್ದು ಇರಬಹುದು ನನಗೆ ನೆಪಿಲ್ಲ. ವಾಹನಗಳನ್ನು ಪೋಲಿಸರ ಮುಂಭಾಗ ನಿಲ್ಲಿಸಿದ್ದರು ಅಮಾನತ್ತು ಮಹಜರನ್ನು ಪೋಲಿಸರೆ ,ಟೈಪ ಮಾಡಿದ್ದು ಅದಕ್ಕೆ ಸಯಾರು ಸೂಚನೆಗಳನ್ನು ನೀಡಿದ್ದರು ನನಗೆ ನೆನಪಿಲ್ಲ . ನಾನು ಪೋಲಿಸ ಠಾಣೆಯಲ್ಲಿ ಒಂದು ಸಹಿ ಮಾಡಿರುತ್ತೇನೆ . ಸ್ಕೂಟಿ ಹಿರೋ ಹೊಂಡಾ ಕಂಪನಿ ಇರುತ್ತದೆ . ನಾನು ಯಾವುದೆ ಮಹಜರನಲ್ಲಿ ಭಾಗಿಯಾಗದೆ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸ್ಥಳ ಮಹಜರ ಮಾಡಿಲ್ಲ ಹಾಗು ವಾಹನಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಹೆಚ್ ಆರ್ ಜೆ ವಕೀಲರು 1 ನೇ ಆರೋಪಿ ಪರ ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.